ದಿನಾಂಕಃ 11-08-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ** ಪ್ರತಿವಾದಿ ರವರ ಪರ ವಕೀಲರಿಂದ,

7) ಪ್ರತಿವಾದಿ ನಿವೇಶವನ್ನು ಖರೀದಿ ಮಾಡಿ ಮನೆಯನ್ನು ನಿರ್ಮಿಸಿರುತ್ತಾರೆ. ಚನ್ನೇಗೌಡ ಮತ್ತು ಮಾರುತಿ ಪ್ರಸಾದ್ ತಂದೆ ಮತ್ತು ಮಗ ಎಂದರೆ ಸರಿಯಲ್ಲ. ಚನ್ನೇಗೌಡ ರವರಿಗೆ 70 ವರ್ಷ ವಯಸ್ಸು ಆಗಿರುತ್ತದೆ ಎಂದರೆ ಸರಿಯಲ್ಲ. ನಾನು ಕರಾರು ಪತ್ರದ ಆದಾರದ ಮೇಲೆ ತಿಳುವಳಿಕೆ ಪತ್ರ ನೀಡಿದ 11 ದಿನಗಳ ನಂತರ ಚೆಕ್ಕು ನೀಡಿರುತ್ತಾರೆ. ಕರಾರು ಪತ್ರ ಎಷ್ಟು ಮೌಲ್ಯಕ್ಕೆ ಆಗಿತ್ತು ಎಂಬುದನ್ನು ನಾನು ವಾದ ಪತ್ರದಲ್ಲಿ ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. ರೂ. 1,50,000/- ಹಣವನ್ನು ಚೆಕ್ಕಿನ ಮೂಲಕ ಪಾವತಿ ಮಾಡಿರುತ್ತೇನೆ. ಚೆಕ್ಕಿನ ಸಂಖ್ಯೆಯನ್ನು ವಾದಿ ಪತ್ರದಲ್ಲಿ ನಮೂದು ಮಾಡಿರುವುದಿಲ್ಲ. ರೂ. 5,25,000/- ಹಣವನ್ನು ಆದಾಯ ತೆರಿಗೆ ದಾಖಲೆಗಳಲ್ಲಿ ನಮೂದು ಮಾಡಿರುವುದಿಲ್ಲ.

8) ನಾನು ಕರಾರು ಪತ್ರವನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಕರಾರು ಪತ್ರಕ್ಕೂ ಮತ್ತು ಪ್ರತಿವಾದಿಗೂ ಸಂಭಂದ ಇಲ್ಲ ಎಂದರೆ ಸರಿಯಲ್ಲ. ನಿಶಾನೆ.ಪಿ-1 ದಾಖಲೆಯ ಬರಹದಲ್ಲಿ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ. ನನ್ನ ಮತ್ತು ಪ್ರತಿವಾದಿಯ ನಡುವೆ ಯಾವುದೇ ಕರಾರು ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪಲ್ಲವಿ ಮತ್ತು ಉದಯ ರವರ ವಿರುದ್ಧ ಅಸಲು ದಾವೆ ಸಂಖ್ಯೆ 249/2024 ದಾವೆ ಸಲ್ಲಿಸಿರುತ್ತೇನೆ. ಪ್ರತಿವಾದಿ ನನ್ನ ಬಳಿ ಚೀಟಿ ಹಾಕಿದ್ದು, ಚೀಟಿ ಭದ್ರತೆಗಾಗಿ ಚೆಕ್ಕು ನೀಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮತ್ತು ಪ್ರತಿವಾದಿಯ ನಡುವೆ ಯಾವುದೇ ಹಣದ ವ್ಯವಹಾರ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ